# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

## ಶುದ್ಧ ಕ್ರಯಪತ್ರ ಅಧಿಕ ವರಮಾನ ಗುಂಪಿನ (ಹೆಚ್.ಐ.ಜಿ.) ಮನೆಗಳು

## (ಎಸ್.ಎಫ್.ಹೆಚ್.ಎಸ್)

ಸನ್ __________ ನೇ ಇಸವಿ __________________________ ತಿಂಗಳು ______________________ ದಿನಾಂಕದಂದು ಮೊದಲನೆಯ ಪಕ್ಷಕಾರರಾದ ಈ ಪತ್ರದಲ್ಲಿ ಇನ್ನು ಮುಂದೆ ಮಾರಟಗಾರರು (ಮಾರಾಟಗಾರರು ಶಬ್ದವು ಅವರ ಉತ್ತರಾಧಿಕಾರಿಗಳು, ಹಸ್ತಾಂತರಣಕಾರರು ಮುಂತಾದವರನ್ನು ಒಳಗೊಳ್ಳುತ್ತದೆ) ಎಂದು ಕರೆಯಲಾಗಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇದನ್ನು ಪ್ರತಿನಿಧಿಸುವ ಅದರ ಉಪಕಾರ್ಯದರ್ಶಿಯವರು ಎರಡನೆಯ ಪಕ್ಷಕಾರರಾದ ಈ ಪತ್ರದಲ್ಲಿ ಇನ್ನು ಮುಂದೆ ಖರೀದಿದಾರ (ಖರೀದಿದಾರ ಎಂಬ ಶಬ್ದವು ಆತನ / ಆಕೆಯ ವಾರಸುದಾರರು, ಉತ್ತರಾಧಿಕಾರಿಗಳು ಮತ್ತು ಹಸ್ತಾಂತರಣಕಾರರು ಮುಂತಾದವರನ್ನು ಒಳಗೊಳ್ಳುತ್ತದೆ) ಎಂದು ಕರೆಯಲಾಗಿರುವ ____________________________________________________ ಎಂಬಲ್ಲಿ ವಾಸವಾಗಿರುವ ಶ್ರೀ ____________________________________________________________ ಎಂಬುವವರ ಮಗನಾದ/ಮಗಳಾದ/ಹೆಂಡತಿಯಾದ ಸುಮಾರು ______________________________________________ ವರ್ಷ ವಯಸ್ಸಿನ ಶ್ರೀ / ಶ್ರೀಮತಿ ________________________________________________________________________ ಎಂಬುವವರಿಗೆ ಬರೆದು ಕೊಟ್ಟ ಶುದ್ಧ ಕ್ರಯಪತ್ರದ ಕ್ರಮವೇನೆಂದರೆ :

ಮಾರಾಟಗಾರರಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಪ್ರತಿನಿಧಿಸುವ ಉಪ ಕಾರ್ಯದರ್ಶಿಯವರು ಆ ಸಾಮರ್ಥ್ಯದಲ್ಲಿ ಷೆಡ್ಯೂಲ್ ಸ್ವತ್ತನ್ನು ಖರೀದಿದಾರರಿಗೆ ಮಾರಟ ಮಾಡಿದ್ದು, ಖರೀದಿದಾರರು (ಎರಡನೆಯ ಪಕ್ಷಕಾರರು) ಅಧಿಕ ವರಮಾನ ಗುಂಪಿನ (ಹೆಚ್.ಐ.ಜಿ.) ಷೆಡ್ಯೂಲ್ ಮನೆಯ ಪೂರ್ಣ ಬೆಲೆಯಾದ ________________________ ರೂಪಾಯಿಗಳನ್ನು (______________________________________________________________________ ರೂಪಾಯಿಗಳು) ಪಾವತಿ ಮಾಡಿರುವುದಲ್ಲದೆ __________________________ ಸಬ್ ರಿಜಿಸ್ಟ್ರಾರ್‌ರವರ ಕಚೇರಿಯಲ್ಲಿ ___________ ದಿನಾಂಕದಂದು ________ ಪುಸ್ತಕದ __________ ಸಂಪುಟದ __________ ರಿಂದ ___________ ಪುಟಗಳಲ್ಲಿ ___________ ಸಂಖ್ಯೆಯಾಗಿ ____________________ ನೋಂದಾಯಿಸಲಾಗಿರುವ ಗುತ್ತಿಗೆ ಹಾಗೂ ಮಾರಟ ಒಪ್ಪಂದ ಪತ್ರವನ್ನು ಸಲ್ಲಿಸಿರುತ್ತಾರೆ. ಗುತ್ತಿಗೆ ಹಾಗೂ ಮಾರಾಟ ಒಪ್ಪಂದ ಪತ್ರದ / ತಾತ್ಕಾಲಿಕ ಸ್ವಾಧೀನ ಪತ್ರದ ಪ್ರಕಾರ ಸದರಿ ಮನೆಯ ವಾಸ್ತವಿಕ ಸ್ವಾಧೀನತೆಯನ್ನು ___________________ ರಂದು ವಹಿಸಿಕೊಡಲಾಗಿದೆ.

____________________ ಬಡಾವಣೆಯಲ್ಲಿರುವ ___________________________________ ಸಂಖ್ಯೆಯ ಅಧಿಕ ವರಮಾನ ಗುಂಪಿನ ಮನೆಯನ್ನು ಖರೀದಿದಾರರಿಗೆ ಹಂಚಿಕೆ ಮಾಡಲಾಗಿದ್ದು, ಮಾರಟಗಾರರು ಖರೀದಿದಾರರೊಂದಿಗೆ ಈ ಮುಂದಿನಂತೆ ಒಡಂಬಡಿಕೆ ಮಾಡಿಕೊಳ್ಳುತ್ತಾರೆ :

1. ಈ ಸಂಬಂಧ ಸರ್ಕಾರವು ಹೊರಡಿಸಿರುವ ಆದೇಶಗಳ ಅನುಸಾರವಾಗಿ ಮತ್ತು ಅಧಿಕ ವರಮಾನ ಗುಂಪಿನ ಮನೆಯ ಪೂರ್ಣ ಬೆಲೆಯನ್ನು ಖರೀದಿದಾರರು ಪಾವತಿ ಮಾಡಿರುವುದನ್ನು ಪರಿಗಣಿಸಿ ಸದರಿ ಮನೆಯ ಪೂರ್ಣ ಮತ್ತು ಏಕೈಕ ಹಕ್ಕುದಾರರಾದ ಮಾರಟಗಾರರು ಈ ಪತ್ರದ ಷೆಡ್ಯೂಲ್‌ನಲ್ಲಿ ಹೆಚ್ಚು ನಿರ್ದಿಷ್ಟವಾಗಿ ಮತ್ತು ವಿಶದವಾಗಿ ವಿವರಿಸಲಾಗಿರುವ ___________________________________________ ಬಡಾವಣೆಯಲ್ಲಿರುವ ಅಧಿಕ ವರಮಾನ ಗುಂಪಿನ ಮನೆಯ ಪೂರ್ಣ ಅಧಿಕಾರ, ಹಕ್ಕು ಮತ್ತು ಹಿತಾಸಕ್ತಿಯನ್ನು ಈ ಕ್ರಯಪತ್ರದ ಮೂಲಕ ಖರೀದಿದಾರರಿಗೆ ಈ ಮೂಲಕ ವಹಿಸಿಕೊಟ್ಟಿದ್ದಾರೆ ಮತ್ತು ವರ್ಗಾಯಿಸಿದ್ದಾರೆ. ಖರೀದಿದಾರರು ಸದರಿ ಮನೆಯ ಸಂಪೂರ್ಣ ಮಾಲೀಕರಾಗಿ ಅದನ್ನು ಹೊಂದಿ ಅನುಭವಿಸಿಕೊಂಡು

ಹೋಗತಕ್ಕದ್ದು. ಗುತ್ತಿಗೆ ಹಾಗೂ ಮಾರಾಟ ಒಪ್ಪಂದ ಪತ್ರದ / ತಾತ್ಕಾಲಿಕ ಸ್ವಾಧೀನ ಪತ್ರದ ಆಧಾರದ ಮೇಲೆ ಖರೀದಿದಾರರಿಗೆ ಸದರಿ ನಿವೇಶನದ ವಾಸ್ತವಿಕ ಸ್ವಾಧೀನತೆಯನ್ನು ______________________________ರಂದು ನೀಡಲಾಗಿದೆ.

2. ಎರಡನೆಯ ಪಕ್ಷಕಾರರು ಈ ಮುಂದಿನ ಷರತ್ತುಗಳಿಗೊಳಪಟ್ಟು ಷೆಡ್ಯೂಲ್ ಅಧಿಕ ವರಮಾನ ಗುಂಪು ಮನೆಯ. ಸ್ವಾಮ್ಯವನ್ನು ಹೊಂದಿ ಅದರಿಂದ ಬರುವ ಬಾಡಿಗೆ ಮತ್ತು ಲಾಭ ಮುಂತಾದವುಗಳನ್ನು ಅನುಭವಿಸಿಕೊಂಡು ಹೋಗತಕ್ಕದ್ದು.

1) ಹಂಚಿಕೆ ಮಾಡಲಾಗಿರುವ ಈ ಕಟ್ಟಡವನ್ನು ಪೂರ್ಣವಾಗಿ ಮಾನವ ವಾಸಕ್ಕಾಗಿ ಬಳಸತಕ್ಕದ್ದು. ಅಂಗಡಿಯಾಗಿ ಅಥವಾ ಕಟ್ಟಡವಾಗಿ ಅಥವಾ ಮನೆಯಾಗಿ ಅಥವಾ ಯಾಂತ್ರಿಕ ಶಕ್ತಿಯಿಂದ ಅಥವಾ ಬೇರೆ ರೀತಿಯಿಂದ ತಯಾರಿಕಾ ಕಾರ್ಯಗಳನ್ನು ನಡೆಸಲಾಗುತ್ತಿರುವ ಕಟ್ಟಡವಾಗಿ ಬಳಸುವಂಥ ಯಾವುದೇ ಭಾಗಗಳನ್ನು ಸದರಿ ಕಟ್ಟಡಕ್ಕೆ ಹೊಂದಿ ಕೊಂಡಂತೆ ಅಥವಾ ಹೊಂದಿಕೊಂಡಿರದಂತೆ ನಿರ್ಮಾಣ ಮಾಡತಕ್ಕದ್ದಲ್ಲ.

2) ಸದರಿ ಕಟ್ಟಡವನ್ನು ಗುತ್ತಿಗೆ ಹಾಗೂ ಮಾರಾಟ ಒಪ್ಪಂದ ಪತ್ರವನ್ನು ನೋಂದಣಿ ಮಾಡಿದ ದಿನಾಂಕದಿಂದ / ತಾತ್ಕಾಲಿಕ ಸ್ವಾಧೀನ ಪತ್ರದ ದಿನಾಂಕದಿಂದ 10 (ಹತ್ತು) ವರ್ಷಗಳ ಅವಧಿಯವರೆಗೆ ಯಾರಿಗೂ ಮಾರಾಟ ಮಾಡತಕ್ಕದ್ದಲ್ಲ.

## ಷೆಡ್ಯೂಲ್

______________________ ಬಡಾವಣೆಯ ______________________ ವಿಭಾಗದಲ್ಲಿರುವ ದಲ್ಲಿರುವ____________________ಸಂಖ್ಯೆಯುಳ್ಳ ಪೂರ್ವ ಪಶ್ಚಿಮ____________________ ಚ.ಅ./ಚ.ಮೀ ಉತ್ತರ ದಕ್ಷಿಣ____________________ಚ.ಅ./ಚ.ಮೀ. ಒಟ್ಟು ____________________ಚ.ಅ./ಚ.ಮೀ ವಿಸ್ತೀರ್ಣ ಉಳ್ಳ ನಿವೇಶನದಲ್ಲಿ ನಿರ್ಮಾಣ ಮಾಡಿರುವ ಇಡೀ ಅಧಿಕ ವರಮಾನ ಗುಂಪು (ಎಸ್‌ಎಫ್‌ಹೆಚ್‌ಎಸ್) ಮನೆ ಮತ್ತು ಭೂಮೇಲ್ಮೈನ ಕೆಳಭಾಗಕ್ಕೆ ಅಥವಾ ಮೇಲ್ಭಾಗಕ್ಕೆ ಸಂಬಂಧಿಸಿದ ಯಾವುದೇ ರೀತಿಯ ಸಕಲ ಹಕ್ಕುಗಳನ್ನು, ಉಪ ಹಕ್ಕುಗಳನ್ನು ಒಳಗೊಂಡ ಸ್ವತ್ತಿಗೆ ಚಕ್ಕುಬಂದಿ.

| | |
|---|---|
| ಪೂರ್ವಕ್ಕೆ : | ಪಶ್ಚಿಮಕ್ಕೆ : |
| ಉತ್ತರಕ್ಕೆ : | ದಕ್ಷಿಣಕ್ಕೆ : |

ಇದಕ್ಕೆ ಸಾಕ್ಷಿಯಾಗಿ ಮಾರಾಟಗಾರರು ಬೆಂಗಳೂರಿನಲ್ಲಿ ಮೇಲೆ ತಿಳಿಸಿದ ದಿನಾಂಕ ತಿಂಗಳು ವರ್ಷದಂದು ತಮ್ಮ ಸಹಿಯನ್ನು ಹಾಕಿರುತ್ತಾರೆ.

**ಸಾಕ್ಷಿದಾರರು**

1.

2.

ಉಪಕಾರ್ಯದರ್ಶಿ

**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,**

ಬೆಂಗಳೂರು.